ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ

ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 166/2020

ಚಾ.ಸಾ - 9
ಪ್ರಾ.ಸಾ - 8

ಸಾಕ್ಷಿಗೆ ದಿನಾಂಕ 05-08-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯ ಹೆಸರು	ಃ	ಶಿವಣ್ಣ
ತಂದೆಯ ಹೆಸರು	ಃ	ಶರಣಪ್ಪ ನಾಯ್ಕೋಡಿ
ವಯಸ್ಸು	ಃ	29 ವರ್ಷ
ಉದ್ಯೋಗ	ಃ	ಕೂಲಿ
ವಾಸಸ್ಥಳ	ಃ	ಇಜೇರಿ, ತಾಃ ಯಡ್ರಾಮಿ

ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

1 ರಿಂದ 7 ನೇ ಆರೋಪಿತರು ನನ್ನ ಚಿಕ್ಕಪ್ಪಂದಿರಾಗಬೇಕು. 8 ನೇ ಆರೋಪಿ ನನ್ನ ಅಜ್ಜಿ ಆಗಬೇಕು. ಚಾಸಾ-1 ನನ್ನ ಚಿಕ್ಕಮ್ಮಳಾಗಬೇಕು. ಚಾಸಾ-4 ಚಿಕ್ಕಪ್ಪನಾಗಬೇಕು. ಚಾಸಾ-5 ನನ್ನ ಅಜ್ಜಿ, ಚಾಸಾ--6 ನನ್ನ ಕಾಕ, ಚಾಸಾ-7 ನನ್ನ ಅಣ್ಣ, ಚಾಸಾ-10 ಮುತ್ಯನಾಗಬೇಕು.

ದಿನಾಂಕ 05-04-2020 ರಂದು ಬೆಳಿಗ್ಗೆ 8-30 ಗಂಟೆಗೆ ಇಜೇರಿಯಲ್ಲಿಯ ಸಾರ್ವಜನಿಕ ತಿಪ್ಪೆಯನ್ನು 1 ನೇ ಆರೋಪಿಯು ತುಂಬಿಕೊಂಡು ಹೋಗುತ್ತಿದ್ದನು. ನಿಂಗಪ್ಪ ಮತ್ತು ಅಂಬಲಪ್ಪ ಮತ್ತು ಈರಮ್ಮ ಕೇಳಲು ಹೋದಾಗ ನಮ್ಮದು ತಿಪ್ಪೆ ಇದೆ ಬೋಸಡಿ ಮಕ್ಕಳೇ ನಮಗೆ ಯಾರು ಕೇಳೋರು ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಅಯ್ಯಪ್ಪನು ಈರಮ್ಮರವರ ಸೀರೆಯನ್ನು ಹಿಡಿದು ಎಳೆದಾಡಿ ಕಪಾಳಕ್ಕೆ ಹೊಡೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ಶಂಕ್ರಪ್ಪನು ನಿಂಗಪ್ಪನಿಗೆ ಒದ್ದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ . ಅಂಬ್ಲಪ್ಪನು ಬಡಿಗೆಯಿಂದ ನಿಂಗಪ್ಪನ ತಲೆಗೆ ಭುಜಕ್ಕೆ ಹೊಡೆದಿರುತ್ತಾನೆ. ನಾಗಮ್ಮ ಗಂಡ ಸಾಯಬಣ್ಣಳು ಬಂದು ನಮ್ಮ ಅಂಬ್ಲಮ್ಮಳ ಸೀರೆಯನ್ನು ಜಗ್ಗಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಾವು ಬಂದು ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅವರಿಗೆ ಚಿಕಿತ್ಸೆ ಕೊಡಿಸಿ ಪೊಲೀಸ್ ಠಾಣೆಗೆ ಹೋಗಿರುತ್ತೇವೆ. ಈ ವಿಚಾರವಾಗಿ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿ ನ್ಯಾಯಾಲಯದಮುಂದಿರುವ ಎಂ.ಒ.-1 ಮತ್ತು 2 ಬಡಿಗೆಯನ್ನು ನೋಡಿ ಗುರುತಿಸಿರುತ್ತಾರೆ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು

ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

ಪಾಟೀ ಸವಾಲುಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ

ಆರೋಪಿತರು ಎಲ್ಲರೂ ಗುಂಪು ಕಟ್ಟಿಕೊಂಡು ಬಂದು ಚಾಸಾ-1, 4 ಮತ್ತು 5 ರವರೊಂದಿಗೆ ಗಲಾಟೆ ಮಾಡಿರುತ್ತಾರೆ ಎಂದರೆ ಸರಿ. ಈಶಪ್ಪನು ಕೈಯಿಂದ ನಿಂಗಣ್ಣನ ಕಪಾಳಕ್ಕೆ ಹೊಡೆದಿರುತ್ತಾನೆ ಎಂದರೆ ಸರಿ. ಅಯ್ಯಪ್ಪನು ಚಾಸಾ-1 ರವರಿಗೆ ಸೊಂಟದ ಮೇಲೆ ಹೊಟ್ಟೆಯ ಮೇಲೆ ಒದ್ದಿರುತ್ತಾನೆ ಎಂದರೆ ಸರಿ. ನಾಗಮ್ಮಳು ಅಂಬ್ಲಮ್ಮಳ ತಲೆ ಕೂದಲು ಹಿಡಿದು ಜಗ್ಗಾಡಿರುತ್ತಾಳೆ ಎಂದರೆ ಸರಿ. ಆರೋಪಿತರು ಚಾಸಾ-1, 4 ಮತ್ತು 5 ರವರಿಗೆ ಮುಂದೆ ಹೋಗದಂತೆ ತಡೆದಿರುತ್ತಾರೆ ಎಂದರೆ ಸರಿ. ಆರೋಪಿತರೆಲ್ಲರೂ ಜೀವದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ.ಇ.ಬಿ. ವಕೀಲರಿಂದ .

ನೀವು ಚಾಸಾ-1 ರವರ ಸಂಬಂಧಿಕರು ಎಂದರೆ ಸರಿ. ನೀವು ಚಾಸಾ-1 ರವರ ಅಣ್ಣನ ಮಗ ಎಂದರೆ ಸರಿ. ನಾನು ಘಟನೆಯನ್ನು ಕಣ್ಣಾರೆ ನೋಡಿರುತ್ತೇನೆ. ನಾನು ಘಟನೆಯನ್ನು ಕಣ್ಣಾರೆ ನೋಡಿರುತ್ತೇನೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ದಿನಾಂಕ 05-04-2020 ರಂದು ಸಾಯಂಕಾಲ ಹೇಳಿಕೆ ನೀಡಿರುತ್ತೇನೆ. ಹೇಳಿಕೆಯನ್ನು ನಾನು ಪೊಲೀಸರಿಗೆ ಹೇಳಿರುತ್ತೇನೆ. ಪೊಲೀಸರು ನಿಮ್ಮ ಹೇಳಿಕೆಯಲ್ಲಿ ಏನು ಬರೆದಿದ್ದಾರೆ ಎಂದು ಮಾಹಿತಿ ಇದೆಯಾ ಎಂದರೆ ಇದೆ ಎಂದು ಉತ್ತರಿಸುತ್ತಾರೆ. ಚಾಸಾ-1 ರವರು ಹೇಳಿದ ಆಧಾರದ ಮೇರೆಗೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೀರಿ ಎಂದರೆ ಸರಿಯಲ್ಲ. ಆ ದಿನ ಯಾವುದೇ ಘಟನೆ ನಡೆದಿಲ್ಲ ಮತ್ತು ನೀವು ಮತ್ತು ಚಾಸಾ-1 ರವರು ಸಂಬಂಧಿಕರಾದ ಕಾರಣ ಘಟನೆ ನಡೆದಿಲ್ಲದಿದ್ದರೂ ಸಹ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ